**ರಾಮನಗರದ 1ನೇ ಅಪರ ಹಿರಿಯ ಸಿವಿಲ್ ಮತ್ತು**
**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

C.C.88/2023

CW-3 / PW-3

| | | |
|---|---|---|
| ಹೆಸರು | :- | ಸಂತೋಷ |
| ತಂದೆಯ ಹೆಸರು | :- | ಶಿವಲಿಂಗಯ್ಯ |
| ವಯಸ್ಸು | :- | 43 ವರ್ಷ |
| ವೃತ್ತಿ | :- | ಚಾಲಕ |
| ವಾಸ ಸ್ಥಳ | :- | ಕೆಂಪೇಗೌಡನದೊಡ್ಡಿ |
| ದಿನಾಂಕ | :- | 25.03.2026 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ಇರುತ್ತದೆ. ಆರೋಪಿಗಳಿಗೂ ಮತ್ತು ನಮಗೂ ಯಾವುದೇ ಘಟನೆ ನಡೆದಿರುವುದಿಲ್ಲ. ಆ ಆರೋಪಿಗಳು ನನಗೆ ಮತ್ತು ಚಾಸಾ-1, ಮತ್ತು ನಿಪಿ-2 ಮತ್ತು ಚಾಸಾ-4ರವರಿಗೆ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕ 16.05.2023 ರಂದು ರಾತ್ರಿ 10-00 ರಿಂದ 10-30 ಗಂಟೆಗೆ ಆರೋಪಿಗಳು ಕೆಎ-42-ಎನ್-7009 ಕಾರನ್ನು ರಾಮನಗರ ಟೌನ್ ಗಾಂಧಿನಗರದ ಸರ್ಕಲ್ ಬಳಿ ಯೂ ಟರ್ನ್ ತೆಗೆದುಕೊಳ್ಳುವ ವಿಚಾರದಲ್ಲಿ ಅಕ್ರಮವಾಗಿ

ಗುಂಪು ಕಟ್ಟಿಕೊಂಡು ಬಂದು ವಿನಾ ಕಾರಣ ಜಗಳ ತೆಗೆದು ಚಾಸಾ-1, ಚಾಸಾ-2 ಮತ್ತು ಚಾಸಾ-4ರವರಿಗೆ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-2ರವರಿಗೆ ಒಂದು ಕಬ್ಬಿಣದ ಪಂಚ್ ನಿಂದ ಮತ್ತು ಕಲ್ಲಿನಿಂದ ಮುಖ ಮತ್ತು ಮೂಗಿನ ಮೇಲೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೂ ಸಹ ಮುಖ ತುಟಿ ಮತ್ತು ತಲೆಯ ಭಾಗಕ್ಕೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4ರವರಿಗೂ ಸಹ ತಲೆ ಮತ್ತು ಮುಖಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

ಈ ವಿಚಾರವಾಗಿ ನಾನು ದಿನಾಂಕ 19.05.2021 ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5ರಲ್ಲಿ ಬರೆದ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗಳ ಜೊತೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ-</u>

ಹಾಜರಿದ್ದು ಅವರ ಪರ ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ರಾಮನಗರ.